# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 285 (282)
ಮಾನ್ಯ ಸದಸ್ಯರ ಹೆಸರು : ಶ್ರೀ ಯು.ಬಿ. ವೆಂಕಟೇಶ್ (ನಾಮ ನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ : 15.02.2023
ಉತ್ತರಿಸುವ ಸಚಿವರು : ಮಾನ್ಯ ಲೋಕೋಪಯೋಗಿ ಇಲಾಖೆಯ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದ ಕಬ್ಬನ್‌ಪಾರ್ಕ್ ಗೆ ಹೊಂದಿಕೊಂಡಂತೆ ಇರುವ ಕೆ.ಆರ್. ವೃತ್ತದಲ್ಲಿರುವ ಲೋಕೋಪಯೋಗಿ ಇಲಾಖೆ ಆವರಣದಲ್ಲಿ ಕೆಲವು ಖಾಸಗಿ ವ್ಯಕ್ತಿಗಳಿಗೆ ಮಳಿಗೆಗಳನ್ನು ತೆರೆಯಲು ಅವಕಾಶವನ್ನು ನೀಡುವ ಸಲುವಾಗಿ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಇತ್ತೀಚೆಗೆ ನೀಡಿರುವ ಟಿಪ್ಪಣಿಗೆ ವಿರುದ್ಧವಾಗಿ ಲೋಕೋಪಯೋಗಿ ಇಲಾಖೆಯು ಟೆಂಡರ್‌ನ್ನು ಕರೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬೆಂಗಳೂರಿನ ಕೆ.ಆರ್ ವೃತ್ತದಲ್ಲಿರುವ ಲೋಕೋಪಯೋಗಿ ಇಲಾಖೆಯ ಆವರಣದಲ್ಲಿ ಲೋಕೋಪಯೋಗಿ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಖಜಾನೆ ಇಲಾಖೆ, ಅಬಕಾರಿ ಇಲಾಖೆ, ಭೂಮಾಪನ ಇಲಾಖೆ ಮುಂತಾದ ಇಲಾಖೆಗಳ ಸುಮಾರು 30 ಕ್ಕೂ ಹೆಚ್ಚು ರಾಜ್ಯ ಮಟ್ಟದ, ಜಿಲ್ಲಾ ಮಟ್ಟದ, ತಾಲ್ಲೂಕು ಮಟ್ಟದ ಕಛೇರಿಗಳು ಕಾರ್ಯನಿರ್ವಹಿಸುತ್ತಿದ್ದು, ಸದರಿ ಕಛೇರಿಗಳಲ್ಲಿ ಸುಮಾರು 800 ಕ್ಕೂ ಹೆಚ್ಚು ಸರ್ಕಾರಿ ನೌಕರರು ಕಾರ್ಯನಿರ್ವಸುತ್ತಿರುತ್ತಾರೆ ಹಾಗೂ ಸದರಿ ಕಛೇರಿಗಳಿಗೆ ಪ್ರತಿದಿನ ಕಾರ್ಯನಿಮಿತ್ತ ನೂರಾರು ಅಧಿಕಾರಿಗಳು, ಜನಪ್ರತಿನಿಧಿಗಳು, ಸಾರ್ವಜನಿಕರು ಭೇಟಿ ನೀಡುತ್ತಿರುತ್ತಾರೆ.<br>ನೌಕರರಿಗೆ ಹಾಗೂ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಆವರಣದಲ್ಲಿ ಈ ಹಿಂದೆ ಅನುಮತಿ ನೀಡಲಾದ ಕ್ಯಾಂಟೀನ್, ಜೆರಾಕ್ಸ್ ಮಳಿಗೆ, ವಾಣಿಜ್ಯ ಮಳಿಗೆ, ನಂದಿನಿ ಮಿಲ್ಕ್ ಪಾರ್ಲರ್ ಮುಂತಾದವುಗಳಿಗೆ ಲೀಸ್ / ನೆಲ ಬಾಡಿಗೆ ಆಧಾರದ ಮೇಲೆ ನೀಡಿದಂತಹ ಎಲ್ಲಾ ಕರಾರುಗಳನ್ನು ಸರ್ಕಾರದ ಪತ್ರ ಸಂಖ್ಯೆ:ಲೋಇ 60 ಬಿಎಂಎಸ್ 2022 ದಿನಾಂಕ:26.08.2022 ರನ್ವಯ ರದ್ದುಪಡಿಸಲಾಗಿದ್ದು, ಅದರಂತೆ ಕೆಲವು ಮಳಿಗೆಗಳನ್ನು ಈಗಾಗಲೇ ತೆರವುಗೊಳಿಸಲಾಗಿದ್ದು, ಬಾಕಿ ಇರುವ ಮಳಿಗೆಗಳನ್ನು ತೆರವುಗೊಳಿಸಲು ಅಂತಿಮ ನೋಟೀಸ್ ನೀಡಲಾಗಿದ್ದು, ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>ಇದರಿಂದ ಕಛೇರಿಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ನೌಕರರುಗಳಿಗೆ ಗ್ರೂಫ್ 'ಡಿ ಮತ್ತು ವಾಹನ ಚಾಲಕರುಗಳಿಗೆ ಹಾಗೂ ಕಾರ್ಯನಿಮಿತ್ತ ಭೇಟಿ ನೀಡುವ ಸಾರ್ವಜನಿಕರಿಗೆ ಆವರಣದಲ್ಲಿ ಊಟ ಉಪಹಾರಕ್ಕೆ, ದೈನಂದಿನ ತುರ್ತು ಅವಶ್ಯಕ ವಸ್ತುಗಳಿಗೆ ಹಾಗೂ ಅಗತ್ಯ |

| | | |
|---|---|---|
| | | ವಸ್ತುಗಳಿಗೆ ಯಾವುದೇ ಅಂಗಡಿಗಳು ಲಭ್ಯವಿಲ್ಲದ ಕಾರಣ ತೊಂದರೆ ಉಂಟಾಗಿದ್ದು, ನೌಕರರು ಹಾಗೂ ಆವರಣಕ್ಕೆ ಭೇಟಿ ನೀಡುವ ಸಾರ್ವಜನಿಕರು ಆವರಣದಲ್ಲಿ ಉಪಹಾರಗೃಹ, ಜಲಪಾನೀಯಗಳು ಹಾಗೂ ತುರ್ತು ಅವಶ್ಯಕ ಸಾಮಾಗ್ರಿಗಳಿಗಾಗಿ ಮಳಿಗೆಗಳನ್ನು ತೆರೆಯಲು ಕ್ರಮ ಕೈಗೊಳ್ಳುವಂತೆ ಕೋರುತ್ತಿರುತ್ತಾರೆ.<br>ಮಾನ್ಯ ನ್ಯಾಯಾಲಯದ ಆದೇಶಗಳಂತೆ ಹಾಗೂ ಸರ್ಕಾರದ ನಿಯಮಗಳಂತೆ ಸರ್ಕಾರದ ಜಾಗವನ್ನು ಯಾವುದೇ ಉದ್ದೇಶಕ್ಕಾಗಿ ನೀಡಬೇಕಾದಲ್ಲಿ ಸಾರ್ವಜನಿಕ ಪಾರದರ್ಶಕ ಕಾಯ್ದೆ ಅನ್ವಯ ಟೆಂಡರ್ ಅಥವಾ ಹರಾಜಿನ ಮೂಲಕ ನೀಡಬಹುದಾಗಿರುತ್ತದೆ. ಆದುದರಿಂದ ಮೇಲ್ಕಂಡ ಅಂಶಗಳನ್ನು ಪರಿಗಣಿಸಿ ಲೋಕೋಪಯೋಗಿ ಇಲಾಖೆಯ ಆವರಣದಲ್ಲಿ ದೈನಂದಿನ ಕಛೇರಿ ನಿರ್ವಹಣೆಗೆ ಹಾಗೂ ವಾಹನ ಸಂಚಾರಕ್ಕೆ ತೊಂದರೆ ಉಂಟಾಗದಂತೆ ಅವಶ್ಯವಿರುವ ವಿವಿಧ ವಾಣಿಜ್ಯ ಉದ್ದೇಶಕ್ಕೆ ಸ್ಥಳವನ್ನು ಗುರುತಿಸಿ, ಈ ಹಿಂದೆ ಆವರಣದಲ್ಲಿ ನೆಲಬಾಡಿಗೆ / ಲೀಸ್ ಆಧಾರದಲ್ಲಿ ನೀಡಿದ್ದಂತಹ ತಾತ್ಕಾಲಿಕ ವಾಣಿಜ್ಯ ಮಳಿಗೆಗಳ ಬದಲಾಗಿ, ಹೊಸದಾಗಿ ತಾತ್ಕಾಲಿಕ ಮಳಿಗೆಗಳನ್ನು ಹಂಚಿಕೆ ಮಾಡಲು ನಿಯಮಾನುಸಾರ ವಿಭಾಗ ಕಛೇರಿಯಿಂದ ಟೆಂಡರ್ ಕರೆಯಲಾಗಿರುತ್ತದೆ. |
| ಆ) | ಬಂದಿದ್ದಲ್ಲಿ, ಸರ್ಕಾರವು ಕಬ್ಬನ್ ಉದ್ಯಾನವನದಲ್ಲಿರುವ ವನ್ಯ ಸಂಕುಲ ಮತ್ತು ಪಕ್ಷಿಗಳಿಗೆ ತೊಂದರೆಯಾಗದಂತೆ ಜನ ಮತ್ತು ವಾಹನಗಳ ಸಂಚಾರಕ್ಕೆ ವಿಧಿಸಿರುವ ನಿರ್ಬಂದವನ್ನು ತೆರವುಗೊಳಿಸಲಾಗಿದೆಯೇ; | ಕಬ್ಬನ್ ಪಾರ್ಕ್ ಆವರಣದಲ್ಲಿ ವಾಹನಗಳ ಸಂಚಾರ ವ್ಯವಸ್ಥೆಯು ಲೋಕೋಪಯೋಗಿ ಇಲಾಖೆ ವ್ಯಾಪ್ತಿಗೆ ಅನ್ವಯಿಸುವುದಿಲ್ಲ. ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಸಿಡಿ515 ಹೆಚ್‌ಜಿಎಂ 2014 ದಿನಾಂಕ:05.11.2015 ರನ್ವಯ ಕೆ.ಆರ್ ವೃತ್ತದ ಲೋಕೋಪಯೋಗಿ ಇಲಾಖೆ ಪಿಡಬ್ಲ್ಯೂಡಿ, ಸಿಪಿಐ, ಸ್ಟೇಟ್ ಹುಜೂರ್ ಟ್ರೆಸರಿ, ಎಜುಕೇಷನ್ ಇಲಾಖೆಗಳ ಆವರಣವನ್ನು ಕಬ್ಬನ್ ಪಾರ್ಕ್‌ನಿಂದ ಹೊರಗಿಡಲಾಗಿರುತ್ತದೆ. |
| ಇ) | ಸರ್ಕಾರ ಇತ್ತೀಚೆಗೆ ದಿನಾಂಕ: 29.04.2022ರಂದು ಖಾಸಗಿ ವ್ಯಕ್ತಿಗೆ 10 ವರ್ಷಗಳ ಅವಧಿಗೆ ಲೀಸ್ ಆಧಾರದ ಮೇಲೆ ಸುಮಾರು 210 ಚದರಡಿ ವಿಸ್ತೀರ್ಣದ ಜಾಗವನ್ನು ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು.<br>ಸರ್ಕಾರದ ಪತ್ರ ಸಂಖ್ಯೆ:ಲೋಇ 60 ಬಿಎಂಎಸ್ 2022, ದಿನಾಂಕ:29.04.2022 ರ ಪ್ರಕಾರ ಬೆಂಗಳೂರಿನ ಕೆ.ಆರ್ ವೃತ್ತದ ಲೋಕೋಪಯೋಗಿ ಇಲಾಖೆಗೆ ಸೇರಿದ 210 ಚದರಡಿ ಜಾಗವನ್ನು ಶ್ರೀ ಅಭಿಷೇಕ್ ಎಂ.ಜಿ, ಮಾಲೀಕರು ಸಿಂಪಲ್ ತಿಂಡಿ (ಯುನಿಟ್ ಆಪ್ ಹಳ್ಳಿಮನೆ) ಇವರಿಗೆ ಉಪಹಾರ ಗೃಹವನ್ನು ನಿರ್ಮಿಸಲು ಮಾಸಿಕ ರೂ.36,750.00 ರಂತೆ ಬಾಡಿಗೆಯನ್ನು ನಿಗದಿಪಡಿಸಿ 10 ವರ್ಷಗಳ ಅವಧಿಗೆ ಕೆಲವು ಷರತ್ತಿಗೊಳಪಟ್ಟು ಲೀಸ್ ಆಧಾರದ ಮೇಲೆ ನೀಡಲು ಅನುಮೋದನೆ |
| ಈ) | ಬಂದಿದ್ದಲ್ಲಿ, ಈ ಆದೇಶವನ್ನು ತರಾತುರಿಯಲ್ಲಿ ಹಿಂಪಡೆಯಲು ಕಾರಣವೇನು; (ಸಂಪೂರ್ಣ ವಿವರವನ್ನು ಒದಗಿಸುವುದು) | |

| | | |
|---|---|---|
| | | ನೀಡಲಾಗಿರುತ್ತದೆ. ಅದರಂತೆ ಕಾರ್ಯಪಾಲಕ ಅಭಿಯಂತರರು, ನಂ.2 ಕಟ್ಟಡಗಳ ವಿಭಾಗ, ಬೆಂಗಳೂರುರವರು ಕರಾರು ಒಪ್ಪಂದ ಮಾಡಿಕೊಂಡಿರುತ್ತಾರೆ.<br><br>ಮುಂದುವರೆದು, ಮುಖ್ಯ ಇಂಜಿನಿಯರ್ ರವರು ಕೆ.ಆರ್ ವೃತ್ತದ ಆವರಣದಲ್ಲಿ ಇಲಾಖೆಗಳ ಕಚೇರಿಗಳ ವಾಹನ ಪಾರ್ಕಿಂಗ್ ಗೆ |
| | | ಸಮಸ್ಯೆ ಹಾಗೂ ಜನದಟ್ಟಣೆ ಹೆಚ್ಚಾಗಿರುವುದರಿಂದ, ಆವರಣದಲ್ಲಿರುವ ಸರ್ಕಾರಿ ಕಚೇರಿಗಳಿಗೆ ತೊಂದರೆ ಆಗುತ್ತಿರುವುದರಿಂದ ಜಾಗವು ಲೋಕೋಪಯೋಗಿ ಇಲಾಖೆಗೆ ಅವಶ್ಯವಿದ್ದು, ಅನುಮೋದನೆ ರದ್ದು ಪಡಿಸಲು ಕೋರಿರುತ್ತಾರೆ. ಅದರಂತೆ, ಸರ್ಕಾರದ ಪತ್ರ ಸಂಖ್ಯೆ:ಲೋಇ 60 ಬಿಎಂಎಸ್ 2022 ದಿನಾಂಕ:26.08.2022 ರಲ್ಲಿ ಶ್ರೀ ಅಭಿಷೇಕ್ ಎನ್. ಜಿ. ಮಾಲೀಕರು, ಸಿಂಪಲ್ ತಿಂಡಿ ಇವರೊಂದಿಗೆ ಮಾಡಿಕೊಂಡಿರುವ ಕರಾರನ್ನು ಕೂಡಲೇ ರದ್ದುಪಡಿಸಲು ಹಾಗೂ ಕೆ.ಆರ್. ವೃತ್ತದ ಆವರಣದಲ್ಲಿ ಲೀಸ್ / ಬಾಡಿಗೆ ಆಧಾರದ ನೀಡಿರುವ ಇತರೆ ಎಲ್ಲಾ ಎಲ್ಲಾ ಆಸ್ತಿಗಳ ಕರಾರುಗಳನ್ನು ಕೂಡ ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಗೊಳಿಸಲು ಅನುಮತಿ ನೀಡಲಾಗಿರುತ್ತದೆ. |
| ಉ) | ಸರ್ಕಾರಿ ಕಚೇರಿಗಳ ಆವರಣದಲ್ಲಿ ವಾಣಿಜ್ಯ ಮಳಿಗೆಗಳ ವ್ಯಾಪಾರಕ್ಕೆ ಅನುವು ಮಾಡುವುದರಿಂದ ಸರ್ಕಾರಿ ಕಚೇರಿಗಳ ಕಾರ್ಯಚಟುವಟಿಕೆಗಳ ಮೇಲೆ ಖಾಸಗಿ ವ್ಯಕ್ತಿಗಳು ಹಸ್ತಕ್ಷೇಪ ಮಾಡುವ ಸಂಭವವಿದ್ದು, ಇದರಿಂದ ಆಡಳಿತ ಯಂತ್ರದ ಮೇಲೆ ಬೀರುವ ಪರಿಣಾಮವು ಸರ್ಕಾರದ ಗಮನಕ್ಕೆ ಬಂದಿದೆಯೇ? | ಅಂತಹ ಪ್ರಮೇಯ ಬಂದಿರುವುದಿಲ್ಲ. |

(ಸಂಖ್ಯೆ: ಲೋಇ 11 ಬಿಎಲ್ ಕ್ಯೂ 2023)

**(ಸಿ.ಸಿ. ಪಾಟೀಲ)**
ಮಾನ್ಯ ಲೋಕೋಪಯೋಗಿ ಸಚಿವರು.